ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12.01.2024.

**ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಐದು ಕೈಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-5 ಎಂದು, ಎರಡು ಗಣಕೀಕೃತ ಪಹಣಿಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು, ಐದು ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-8 ರಿಂದ ನಿಪಿ-12 ಎಂದು, ಒಂದು ಗಣಕೀಕೃತ ಪಹಣಿಯನ್ನು ನಿಪಿ-13 ಎಂದು, ನಾಲ್ಕು ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-14 ರಿಂದ ನಿಪಿ-17 ಎಂದು, ಗಣಕೀಕೃತ ಪಹಣಿಯನ್ನು ನಿಪಿ-18 ಎಂದು, ಐದು ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-19 ರಿಂದ ನಿಪಿ-23 ಎಂದು, ಗಣಕೀಕೃತ ಪಹಣಿಯನ್ನು ನಿಪಿ-24 ಎಂದು, ನಾಲ್ಕು ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-25 ರಿಂದ ನಿಪಿ-28 ಎಂದು, ಗಣಕೀಕೃತ ಪಹಣಿಯನ್ನು ನಿಪಿ-29 ಎಂದು, ಮ್ಯೂಟೇಷನ್‌ನ್ನು ನಿಪಿ-30 ಎಂದು, ಹಿಂಬರಹವನ್ನು ನಿಪಿ-31 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**